ಬಗ್ಗೆ ಅವರನ್ನು ಕರೆದು ಹಾಲಿನ ಬೆಲೆಯನ್ನು ನಿರ್ಧಾರ ಮಾಡುತ್ತೇನೆಂದು ಹೇಳಿದ್ದಿರಿ, ಆದರೆ ಇಲ್ಲಿಯವರೆಗೆ ಆ ರೀತಿ ಮಾಡಲಿಲ್ಲ . ನಾನು ಅದರ ಬಗ್ಗೆ ಗಮನಸೆಳೆಯುವ ಸೂಚನೆಯನ್ನು ಸಹ ಕಳಿಸಿಕೊಟ್ಟಿದ್ದೇನೆ. ದಯವಿಟ್ಟು ತಾವು ನಾಳೆದಿನ ಅದರ ಬಗ್ಗೆ ಅವಕಾಶ ಕೊಟ್ಟು ಚರ್ಚೆಗೆ ಬರುವಂತೆ ಮಾಡಿ. ಸರ್ಕಾರ ಅವರನ್ನು ಕರೆದು ಮಾತನಾಡುತ್ತೇವೆ. ಎಂದು ಒಪ್ಪಿಕೊಂಡರೆ ನಾನು ಗಮನ ಸೆಳೆಯುವ ಸೂಚನೆಯಲ್ಲಿ ಅದನ್ನು ತರುವುದಿಲ್ಲ. ತಾವು ಯಾವ ರೀತಿ ತೀರ್ಮಾನ ಮಾಡುತ್ತೀರಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ನಾನು ಅವರನ್ನು ಕರೆದು ಮಾತನಾಡುತ್ತೇನೆ.

ಶ್ರೀ ಸಿ. ಬೈರೇಗೌಡ : ದಯಮಾಡಿ ಆ ಕೆಲಸವನ್ನು ಮಾಡಿ.

ವಿಷಯ : ಕೆ.ಪಿ.ಎಸ್.ಸಿ. ಪರೀಕ್ಷೆಗಳಲ್ಲಿ ಆಗಿದೆ ಎನ್ನಲಾದ ಅವ್ಯವಹಾರಕ್ಕೆ ಮುಖ್ಯಮಂತ್ರಿಗಳ ಉತ್ತರ

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಕೆಪಿಎಸ್‌ಸಿ ಯ ಪರೀಕ್ಷೆಗಳ ಬಗ್ಗೆ ಒಂದು ರೀತಿ ಜಿಜ್ಞಾಸೆ ಈ ಸದನದಲ್ಲಿ, ಹೊರಗೆ ಮತ್ತು ಮಾಧ್ಯಮಗಳಲ್ಲಿ ಸಾಕಷ್ಟು ಪ್ರಚಾರವಾಗಿಬಿಟ್ಟಿದೆ. ನಾನು ಅದರ ಬಗ್ಗೆ ಹೇಳಿಕೆಯನ್ನು ಮಾಡಲು ಅಪೇಕ್ಷ ಪಡುತ್ತಿದ್ದೇನೆ. ಅದರೆ ಹೇಳಿಕೆಯನ್ನು ಮಾಡುವ ಮೊದಲು ಒಂದು ಈ ಸದನದ ಗಮನಕ್ಕೆ ತರಬಯಸುತ್ತಿದ್ದೇನೆ. ಏಕೆಂದರೆ ಈ ಪಿ ಎಸ್‌ಸಿ ಯು ಆರ್ಟಿಕಲ್ 320 ಪ್ರಕಾರ ಸ್ಥಾಪನೆಯಾಗಿದೆ. ಯಾವ ರೀತಿಯಲ್ಲಿ ಹೈಕೋರ್ಟ್‌ಗಳು ಇದೆಯೋ ಆ ಪ್ರಕಾರ ನಾವು ಇವತ್ತು ಪಿಎಸ್‌ಸಿ ಯ ಬಗ್ಗೆ ಇಲ್ಲಿ ಚರ್ಚೆ ಮಾಡತಕ್ಕದ್ದು, ಟೀಕೆ ಮಾಡತಕ್ಕದ್ದು ಆ ಸಂಸ್ಥೆಗೆ ಶೋಭೆಯನ್ನು ತರುವುದಿಲ್ಲ . ಏಕೆಂದರೆ ಹೈಕೋರ್ಟಿನಲ್ಲಿ ಏನಾದರು ನೇಮಕಾತಿಯದಾಗ , ಮತ್ತೊಂದು ಆದಾಗ ಇಲ್ಲಿ ಅದು ಚರ್ಚೆಗೆ ಬರುವುದಿಲ್ಲ . ಅದಕ್ಕೆ ಯಾರಾದರೂ ಅಗ್ರೀವ್ಡ್ ಆದರೆ ಹೈಕೋರ್ಟಿಗೆ ಹೋಗುತ್ತಾರೆ. ಆದರೆ ಫೀಲ್ ಆದಂಥ ಅಭ್ಯರ್ಥಿಗಳೆಲ್ಲರೂ ಸಹ ಈವತ್ತು ಪಿಎಸ್‌ಸಿ ನೇಮಕಾತಿ ಏನು ಇದೆ ಅದರ ವಿರುದ್ಧವಾಗಿ ಆಂಧೋಲನವನ್ನು ಮಾಡತಕ್ಕ ಪ್ರವೃತಿ ಏನು ಇದೆ ಇದು ಸರಿಯಾದ ದಾರಿಯಲ್ಲಿ ಖಂಡಿತವಾಗಿ ಹೋಗುತ್ತಿಲ್ಲ ಎಂಬುದನ್ನು ಹೇಳಬಯಸುತ್ತೇನೆ.

ಏಕೆಂದರೆ ಕೆಲವು ಸಂಸ್ಥೆಗಳಿಗೆ ಅದರದೇ ಆದಂಥ ಒಂದು ಪಾವಿತ್ರತೆ , ಗಾಂಭಿರ್ಯ ಸಂವಿಧಾನಿಕವಾದಂಥ ಸ್ಥಾನಮಾನವಿದೆ. ಇತ್ತೀಚೆಗೆ ಅದರ ಸದಸ್ಯರುಗಳ ಮೇಲೆ ಧಾಳಿ ಮಾಡತಕ್ಕದ್ದು, ಅದರ ಬಗ್ಗೆ ಸರ್ಕಾರ ಕೂಡ ಕೆಲವು ಸಾರಿ ಮಾತನಾಡತಕ್ಕ ಪ್ರವೃತ್ತಿ ಒಳ್ಳೆಯ ಸೂಚನೆಯಂತು ಖಂಡಿತವಾಗಿ ಅಲ್ಲ. ಆದರೆ ಆ ಸಂಸ್ಥೆ ಈ ಸದನದ ಮಟ್ಟಿಗೆ ಮೂಕರಾಗಿರಬೇಕಾಗುತ್ತದೆ . ಅವರು ಇಲ್ಲಿ ಬಂದು ಹೇಳತಕ್ಕಂಥದ್ದು ಇಲ್ಲ. ಆದ್ದರಿಂದ ಈ ಸದನ ಇಂಥ ಸಂವಿಧಾನಿಕವಾದಂಥಸಂಸ್ಥೆಗಳ ರಕ್ಷಣೆಯನ್ನು ವಿಶೇಷವಾದ ರೀತಿಯಲ್ಲಿ ಮಾಡಬೇಕಾದಂಥ ಅವಶ್ಯಕತೆ ಇದೆ ಎಂದು ಪ್ರಸ್ತಾವನೆಯಲ್ಲಿ ನಾನು ಹೇಳುತ್ತೇನೆ. ಏಕೆಂದರೆ ಇದು ಸಾರ್ವಜನಿಕ

ವಸ್ತುವಾಗಿಬಿಟ್ಟಿದೆ, ಅದು ಆ ರೀತಿ ಆಗಬಾರದಿತ್ತು. ಸಾಕಷ್ಟು ಅಪಸ್ವರವು ಏಳತಕ್ಕ ರೀತಿಯಲ್ಲಿ ಸಾಕಷ್ಟು ಚರ್ಚೆಗಳು, ಜಿಜ್ಞಾಸೆಗಳು ಆಗುತ್ತಿರತಕ್ಕದ್ದು ಅತ್ಯಂತ ದುರದೃಷ್ಟಕರ.

1988-91ರ ಗೆಜೆಟೆಡ್ ಪ್ರೊಬೆಷನರಿ ಗ್ರೂಪ್ 'ಎ' ಮತ್ತು 'ಬಿ' ಗ್ರೂಪ್ ಹುದ್ದೆಗಳಿಗೆ ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಶೇಕಡ 70 ಮತ್ತು ಅದಕ್ಕಿಂತ ಹೆಚ್ಚು ಅಂಕಗಳು ಬಂದಿರತಕ್ಕಂಥ ಉತ್ತರ ಪತ್ರಿಕೆಗಳನ್ನು ಅಯೋಗದ ತೀರ್ಮಾನದಂತೆ ಮರು ಮೌಲ್ಯಮಾಪನ ಮಾಡಿಸಿದ್ದು ನಿಜವಾದ ಸಂಗತಿ. ಏಕೆಂದರೆ ಅದನ್ನು ಕಾನೂನಿನ ಪ್ರಕಾರ ನಿಯಮದ ಪ್ರಕಾರ ಅಲ್ಲಿ ಮಾಡಿದ್ದಾರೆ. ಮೊದಲು ಏನು ಅಪಾದನೆಗಳು ಬಂದಿವೆ ಅದರ ಬಗ್ಗೆ ಹೇಳಿ ಅನಂತರ ನಾನು ವಸ್ತುಸ್ಥಿತಿಗೆ ಬರುತ್ತೇನೆ. ಆದರೆ ದಯಮಾಡಿ ನನ್ನ ವಿನಂತಿ ಏನೆಂದರೆ ನಾನು ಹೇಳಿಕೆಯನ್ನು ಕೊಟ್ಟ ಮೇಲೆ ಮನವಿ ಅದರ ಬಗ್ಗೆ ದಯಮಾಡಿ ಚರ್ಚೆ ಮಾಡುವುದು ನಮಗೆ ಯೋಗ್ಯವಲ್ಲವೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅನಂತರ ಮರುಮೌಲ್ಯ ಮಾಪನಕ್ಕೆ ಯಾವುದೇ ರೀತಿಯಾದ ಅಂಕಗಳ ಮಿತಿ ಇರಲಿಲ್ಲ. ಉತ್ತರ ಪತ್ರಿಕೆಗಳಮರುಮೌಲ್ಯಮಾಪನವನ್ನು ಮಾಡಿಸಲು ಆಯೋಗಕ್ಕೆ ಸಂಪೂರ್ಣವಾದಂಥ ಅಧಿಕಾರವಿದೆ. ಆಯೋಗವು ಇದರ ಬಗ್ಗೆ ವಿವರವಾಗಿ ಚರ್ಚಿಸಿದ ನಂತರ ಮೌಲ್ಯಮಾಪನವು ಒಂದೇ ವಿಧವಾಗಿರಲಿ ಎನ್ನತಕ್ಕ ಉದ್ದೇಶದಿಂದ ಶೇಕಡ 70 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ ಉತ್ತರ ಪತ್ರಿಕೆಗಳನ್ನು ಮರುಮೌಲ್ಯಮಾಪನಕ್ಕೆ ಒಳಪಡಿಸಲು ಕೆಪಿಎಸ್‌ಸಿ ಯವರು ತೀರ್ಮಾನ ಮಾಡಿದ್ದಾರೆ. ನಾನಾ ರೀತಿಯ ಚರ್ಚೆಗಳು ಬಂದಿದ್ದರಿಂದ ಇದನ್ನು ಹೇಳಬೇಕಾಗಿದೆ. ಅನಂತರ ಉರ್ದು ಉತ್ತರ ಪತ್ರಿಕೆಗಳನ್ನು ಮರುಮೌಲ್ಯಮಾಪಲನಕ್ಕೆ ಒಳಪಡಿಸಿಲ್ಲ ಎನ್ನತಕ್ಕದ್ದು ಒಂದು ಆಪಾದನೆ ಇಲ್ಲಿ ಬಂದಿದೆ. ಅದು ಪೂರ್ತಿ ನಿರಾಧಾರ . ಶೇಕಡ 70 ಮತ್ತು ಅದಕ್ಕಿಂತ ಹೆಚ್ಚು ಅಂಕಗಳು ಬಂದಿರುವ ಎಲ್ಲಾ ಪಠ್ಯ ವಿಷಯಗಳಲ್ಲಿ ಉರ್ದು ಉತ್ತರ ಪತ್ರಿಕೆಗಳೂ ಸೇರಿ ಮರುಮೌಲ್ಯ ಮಾಪನ ಮಾಡಿಸಿದ್ದಾರೆ. ಇನ್ನು ಪರೀಕ್ಷೆಗಳನ್ನು ನಡೆಸತಕ್ಕ ಸಂಪೂರ್ಣ ಜವಾಬ್ದಾರಿ, ಅದರ ಪರೀಕ್ಷೆಗಳನ್ನು ನಡೆಸಲು ಪೂರ್ಣ ವ್ಯವಸ್ಥೆ, ಮೌಲ್ಯಮಾಪನ, ಫಲಿತಾಂಶಗಳನ್ನು ಪ್ರಕಟಿಸುವಿಕೆ ಪಿಎಸ್‌ಸಿ ಯ ನಿಯಂತ್ರಣಕ್ಕೆ ಒಳಪಟ್ಟದೆ ಆಯೋಗವು ಆಗಿದ್ದಾಗ್ಗೆ ಪರೀಕ್ಷೆಗಳನ್ನು ನಡೆಸುವ ಮತ್ತು ಇತರೆ ವಿಷಯಗಳ ಬಗ್ಗೆ ನೀಡುವ ಸೂಚನೆಯನ್ನು ಅನುಸರಿಸಿ . ಆಯೋಗದ ಕಛೇರಿಯು ತನ್ನ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಶೇಕಡ 70 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಮೌಲ್ಯಮಾಪಕರು ನೀಡಿದ ಉತ್ತರ ಪತ್ರಿಕೆಗಳ ಮರುಮೌಲ್ಯ ಮಾಪನವನ್ನು ಮಾಡಿಸಲು ಆಯೋಗವು ವಿವರವಾಗಿ ಮತ್ತು ಕೂಲಂಕಷವಾಗಿ ಚರ್ಚಿಸಿ ಮೌಲ್ಯಮಾಪನವು ಏಕೆ ರೂಪದಲ್ಲಿರಬೇಕು ಎನ್ನತಕ್ಕ ದೃಷ್ಟಿಯಿಂದ ತೆಗೆದುಕೊಂಡ ನಿರ್ಣಯ. ಕೇಂದ್ರೀಯ ಲೋಕಸೇವಾ ಆಯೋಗದಲ್ಲಿ ಈ ಪದ್ಧತಿಯನ್ನು ಹತೋಟಿ ಪದ್ಧತಿಯೆಂದು ವಿವರಿಸಲಾಗಿದೆ. ಹಾಗೂ ಈ ಪದ್ಧತಿಯು ಕೇಂದ್ರಿಯ ಲೋಕ ಸೇವಾ ಆಯೋಗವು ಇತರ ರಾಜ್ಯಗಳ ಲೋಕಸೇವಾ ಅಯೋಗ ಮತ್ತು ವಿಸ್ವವಿದ್ಯಾನಿಲಯಗಳು ಅನುಸರಿಸಿಕೊಂಡು ಬಂದಿರುವ ಪದ್ಧತಿಯಾಗಿದೆ. ಇದರಿಂದ ತೊಂದರೆಗೊಳಗಾದ ಒಬ್ಬರು ಅಭ್ಯರ್ಥಿಯ ಗುಜರಾತಿನ ಶ್ರೇಷ್ಟ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ಈ ಪದ್ಧತಿಯನ್ನು ನ್ಯಾಯಾಲಯದ ಅರ್ಜಿಯ ಸಂಖ್ಯೆ 4547 : 85 ರಲ್ಲಿ

ನೀಡಿತ ಆದೇಶದಲ್ಲಿ ಎತ್ತಿಹಿಡಿಯಲಾಯಿತು. ಆಗ ಸರ್ವೋಚ್ಚನ್ಯಾಯಲಯವು ಕೂಡ ಈ ಪದ್ಧತಿಯನ್ನು ಸಮರ್ಥಿಸಿ ಆದೇಶವನ್ನು ನೀಡಿದೆ. ಆದ್ದರಿಂದ ಸರ್ವೋಚ್ಚ ನ್ಯಾಯಾಲಯವು ನೀಡಿದ ಆದೇಶದಿಂದ ಈ ಪದ್ಧತಿಯು ಕೇಂದ್ರಿಯ ಲೋಕಸೇವಾ ಆಯೋಗವು ಒಪ್ಪಿಕೊಂಡಿರುವ ನಿರ್ದಿಷ್ಟ ಪದ್ಧತಿಯಾಗಿದೆ . ಆ ಪದ್ಧತಿಯಿಂದ ಯಾವುದೆ ಡೀವಿಯೇಷನ್ ಆಗುವುದಿಲ್ಲ. ಮತ್ತು ಸರ್ವೋಚ್ಚ ನ್ಯಾಯಾಲಯವು ನೀಡಿರುವ ಆದೇಶವನ್ನು ಪಾಲಿಸಿಕೊಂಡು ಹೋಗುವುದು ರಾಜ್ಯ ಲೋಕ ಸೇವಾ ಆಯೋಗಗಳ ಹೊಣೆಯಾಗಿದೆ. ಯಾವ ರೀತಿ ಹತೋಟಿ ಸಂಯಮವನ್ನು ಹೊಂದಿರ ಬೇಕು ಎಂಬುದರ ಬಗ್ಗೆ ಯಾವುದೇ ನಿರ್ದಿಷ್ಟವಾದ ಸೂಚನೆಯನ್ನು ನ್ಯಾಯಾಲಯವು ನೀಡಿಲ್ಲ. ಮತ್ತು ಆಯೋಗಗಳೇ ಇದರ ಬಗ್ಗೆ ನಿರ್ಣಯವನ್ನು ಕೈಗೊಳ್ಳಬಹುದಾಗಿದೆ. ಇಂಥ ಸಂದರ್ಭದಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಮೌಲ್ಯಮಾಪಕರು ಶೇಕಡ 70 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ನೀಡಿದ ಎಲ್ಲಾ ಪಠ್ಯ ವಿಷಯಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿಸಲು ತೀರ್ಮಾನಿಸಲಾಯಿತು. ಮತ್ತು ಯಾವುದೇ ನಿರ್ದಿಷ್ಟ ಮರು ಮೌಲ್ಯಮಾಪನವಿರಲಿಲ್ಲ, ಹಾಗೂ ಮಿತಿ ಹೊಂದಲಾಗಿತ್ತು. ಆದ್ದರಿಂದ ಈ ಮಿತಿಯನ್ನು ಮೀರಿದ ಎಲ್ಲಾ ವಿಷಯಗಳು ಉರ್ದು ಉತ್ತರ ಪತ್ರಿಕೆಯು ಒಳಗೊಂಡಂತೆ ಎಲ್ಲಾ ಉತ್ತರ ಪತ್ರಿಕೆಗಳನ್ನು ಮರು ಮೌಲ್ಯಮಾಪನಕ್ಕೆ ಒಳಪಡಿಸುವುದು ಸೂಕ್ತ ಮತ್ತು ಸಮಂಜಸ ಮಿತಿಯಾಗಿದೆ. ಆಯೋಗವು ಪರೀಕ್ಷೆಗಳ ಪರ ಮತ್ತು ವಿರುದ್ಧಗಳನ್ನೊಳಗೊಂಡ ಮನವಿಗಳನ್ನು ಸ್ವೀಕರಿಸಿ ಅವುಗಳನ್ನು ವಿವರವಾಗಿ ಪರಿಶೀಲಿಸಲು ಮತ್ತು ಸತ್ಯಶೀಲತೆಯನ್ನು ಪರಿಗಣಿಸಲು ಆಯೋಗವು ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿದೆ. ಅದರಲ್ಲಿ ಪ್ರೊ : ಬಿ.ಬಿ. ಪಾಟೀಕುಳಿ,ಎಸಿ.ಪೆರೇರ, ಶ್ರೀಮತಿ ಶಾರದಮ್ಮ ಮತ್ತು ಶ್ರೀ ನೀರಾವರಿ ಎಸ್.ಸಿ.ಇದ್ದಾರೆ. ಈ ಸಮಿತಿಯು ಅಭ್ಯರ್ಥಿಗಳಿಂದ ಬಂದಿರುವ ಎಲ್ಲಾ ಮನವಿ ಮತ್ತುಕ ಆರೋಪಗಳನ್ನು ಪರಿಶೀಲಿಸಿ ಆಯೋಗಕ್ಕೆ ಅವರು ವರದಿಯನ್ನು ಕೊಡತಕ್ಕಂಥ ಒಂದು ನಿರ್ಣಯವನ್ನು ಕೆಪಿಎಸ್‌ಸಿ ನವರು ಮಾಡಿದ್ದಾರೆ. ಇದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡತಕ್ಕ ಪ್ರಶ್ನೆಯೇ ಬರುವುದಿಲ್ಲ. ನಾವು ಮಾಡುವುದಿಲ್ಲ. ಏಕೆಂದರೆ ಅವರಿಗೆ ಆ ಸಂವಿಧಾನಾತ್ಮಕವಾದಂಥ ಹಕ್ಕಿದೆ. ಆದರೆ ಈ ವಿಷಯ ಇಲ್ಲಿ ಪ್ರಸ್ತಾಪವಾಗಿದೆ ಹೊರಗಡೆಯಾಗಿದೆ. ಅದು ಆಗಬಾರದಿತ್ತು. ಇದರಿಂದ ಎಲ್ಲಾ ರೀತಿಯ ಮಸಿಯನ್ನು ಬಳಿಯತಕ್ಕ ಕಾರ್ಯಕ್ರಮಗಳು ಆಗಿದೆ. ಅದು ಹೇಗೆ, ಏಕೆ ಆಗಿದೆ ಎನ್ನುವ ವಿಮರ್ಶೆಗೆ ನಾನು ಹೋಗುವುದಿಲ್ಲ. ಆದರೆ ಇವತ್ತು ಕೆಪಿಎಸ್‌ಸಿ ಯಾವ ರೀತಿಯಲ್ಲಿ ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕು, ಅದೇ ರೀತಿಯಲ್ಲಿ ನಾವೂ ಕೂಡ ನಿಷ್ಪಕ್ಷಪಾತವಾದ ರೀತಿಯಲ್ಲಿ ಅವರ ಸ್ಥಾನಮಾನವನ್ನು, ಗೌರವವನ್ನು ಉಳಿಸತಕ್ಕ ಜವಾಬ್ದಾರಿ ಸರ್ಕಾರಕ್ಕಿದೆ, ತಮ್ಮದಿದೆ. ಇವತ್ತು ಈ ಸಂಸ್ಥೆಗೆ ಸಂವಿಧಾನಾತ್ಮಕವಾಗಿ ಕೊಟ್ಟಂಥ ಒಂದು ಹಿರಿಮೆ, ಗರಿಮೆಯನ್ನು ಗಾಂಭೀರ್ಯವನ್ನು ಉಳಿಸಿಕೊಳ್ಳತಕ್ಕದ್ದು ನಮ್ಮ ಕರ್ತವ್ಯ. ಏಕೆಂದರೆ , ಇವೆಲ್ಲವೂ ಪ್ರಜಾಪ್ರಭುತ್ವದಸಂಸ್ಥೆಗಳು ಈ ದೇಶದ ಪ್ರಜಾಪ್ರಭುತ್ವ ಭದ್ರವಾಗಿರಬೇಕಾದರೆ ಜನರಿಗೆ ಇಂತಹ ಸಂಸ್ಥೆಗಳ ಮೇಲೆ ವಿಶ್ವಾಸ ಬೆಳೆಸಬೇಕಾಗುತ್ತದೆ . ಆದರೆ, ವಿಶ್ವಾಸ ಶಿಥಿಲಗೊಳಿಸತಕ್ಕಂಥ ಕೆಲಸವನ್ನು ನಾವು ಸಂವಿಧಾನಾತ್ಮಕವಾದ ವಿಧಿಯಿಂದ ಮಾಡಬೇಕೇ ಹೊರತು ಅದರಿಂದ ಹೊರತಾದಂಥ ವಿಧಿಗಳನ್ನು ಬಳಸಿ ಇಂತಹ ಸಂಸ್ಥೆಗಳಿಗೆ ಮಸಿ ಬಳಿಯತಕ್ಕಂಥ ಕೆಲಸಕ್ಕೆ ನಾವು ಯಾರೂ ಕೂಡ ಖಂಡಿತವಾಗಿಯೂ ಪ್ರೋತ್ಸಾಹ, ಉತ್ತೇಜನ ಕೊಡಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೆ.ಪಿ.ಎಸ್.ಸಿ. ಯಲ್ಲಾಗಿರುವ ಅವ್ಯವಹಾರ ಮೇಲ್ನೋಟಕ್ಕೆ ಸಾಬೀತಾಗಿದೆ, ತಮಗೆ ಮನವರಿಕೆಯಾಗಿದೆಯೆಂದು ಉಪ ಮುಖ್ಯಮಂತ್ರಿಗಳೇ ಹೇಳಿದ್ದಾರೆ.

ಶ್ರೀ ಎಂ.ವೀರಪ್ಪ ಮೊಯಿಲಿ : ಯಡಿಯೂರಪ್ಪನವರೇ ತಮಗೆ ಪ್ರೀಜಡ್ಜ್ ಮಾಡತಕ್ಕಂಥ ಅಭ್ಯಾಸ ಯಾವುದಿದೆ, ಅದನ್ನು ಅದಷ್ಟು ಕಡಿಮೆ ಮಾಡಿ. ನಾನು ಇನ್ನೂ ನನ್ನ ಉತ್ತರವನ್ನು ಮುಗಿಸಲಿಲ್ಲ, ಆಗಲೇ ಏಕೆ ಇಷ್ಟು ಆತುರ ? ಇದು ನನಗರ್ಥವಾಗುವುದಿಲ್ಲ. ತಮಗೆ ನಿಷ್ಪಕ್ಷಪಾತವಾದಂಥ ವಿಚಾರ ಬೇಡವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಬೇಕಾಗಿದೆ. ಇವೊತ್ತು ಕೆಪಿಎಸ್‌ಸಿಯಲ್ಲಿ ನೇರವಾಗಿ ಅವ್ಯವಹಾರ ನಡೆದಿದೆ. ಅಲ್ಲಿರತಕ್ಕಂಥ ಕಾರ್ಯದರ್ಶಿಗಳು, ಸಮಿತಿಯ ಸದಸ್ಯರು ಅವ್ಯವಹಾರದಲ್ಲಿ ತೊಡಗಿರುವ ಬಗ್ಗೆ ನಾನು ದಾಖಲೆಯನ್ನು ಒದಗಿಸಿದ್ದೇನೆ. ಡಿ-ಕೋಡ್ ನಂಬರ್ ಅನ್ನು ಕೊಟ್ಟಿದ್ದೇನೆ. ಮತ್ತು ಬಹಿರಂಗವಾಗಿರುವ ಉತ್ತರ ಪತ್ರಿಕೆಯನ್ನೂ ಕೊಟ್ಟಿದ್ದೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ : ಯಡಿಯೂರಪ್ಪನವರೇ ತಾವು ಜವಾಬ್ದಾರಿಯುಳ್ಳ ಗೌರವಯುತ ಸದಸ್ಯರಾಗಿದ್ದೀರಿ. ಈಗ ಬರೀ ಸಮಸ್ಯೆಗಳನ್ನು ತಮಗೆ .....

ಶ್ರೀ ಬಿ.ಎಸ್.ಯಡಿಯೂರಪ್ಪ : ಪರೀಕ್ಷೆಯಲ್ಲಿ ಉತ್ತರ ಪತ್ರಿಕೆಗಳು ಬಹಿರಂಗವಾಗಿರುವ ಬಗ್ಗೆ ಸಂಸ್ಥೆಯ ಕಾರ್ಯದರ್ಶಿಯವರು ಪತ್ರ ಬರೆದಿರುವುದು ಹೌದೇ ಅಲ್ಲವೇ? ಅವರು ಬರೆದಿರುವ ಮೂಲ ಪತ್ರವನ್ನು ಮೊನ್ನೆ ದಿವಸ ಉಪ ಮುಖ್ಯಮಂತ್ರಿಯವರಿಗೆ ಒದಗಿಸಿಕೊಟ್ಟಿದ್ದೇನೆ. ಇವೊತ್ತು ಸಹ ತಮಗೆ ಕಳುಹಿಸಿಕೊಡುತ್ತಿದ್ದೇನೆ. ದಯಮಾಡಿ ಇದು ಮೂಲ ದಾಖಲೆ ಹೌದೇ? ಅಲ್ಲವೇ? ಎಂದು ಹೇಳಿದರೆ ಸಾಕು.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ತಮ್ಮ ಹತೋಟಿಯನ್ನು ಸಂಯಮದಿಂದಿರಿಸಿದರೆ ತಮಗೆ ಸಮರ್ಪಕವಾದ ಉತ್ತರ ಸಿಗುತ್ತದೆ . ಕನಿಷ್ಠ ಪಕ್ಷ ಕರ್ಟಸಿ ಕೊಡಿ. I am giving the reply ಇಡೀ ಸದನವನ್ನು ತಾವು ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಾನು ಇನ್ನೂ ಉತ್ತರವನ್ನು ಮುಗಿಸಿಲ್ಲ ಉತ್ತರ ಮುಗಿಸಿದ ನಂತರ ತಾವು ಈ ಕುರಿತು ಸ್ಪಷ್ಟೀಕರಣ ಕೇಳಿದರೆ ಉತ್ತರ ಕೊಡುತ್ತೇನೆ. ಇಷ್ಟು ಅವಸರವೇಕೆ? You must be fair enough for the debate. ಯಡಿಯೂರಪ್ಪನವರೇ, ತಾವು ನಿಷ್ಪಕ್ಷಪಾತ ದೃಷ್ಟಿಯಿಂದ ನೋಡುವುದನ್ನು ಸ್ವಲ್ಪ ಕಲಿತರೆ ನಮಗೂ ಯೋಗಕ್ಷೇಮ, ರಾಜ್ಯಕ್ಕೂ ಯೋಗಕ್ಷೇಮ. ಅವಸರ ಪಟ್ಟರೆ ಏನೇನೋ ಆಗಿಬಿಡುತ್ತದೆ. ಇದರ ಬಗ್ಗೆ ಚರ್ಚೆ ಬೇಡ. ನಾನು ಉತ್ತರ ಕೊಟ್ಟ ನಂತರ ನಿಮ್ಮ ಚರ್ಚೆಗೆ ಯಾವುದೇ ವಿಷಯ ಉಳಿಯುವುದಿಲ್ಲ. ಈ ಕುರಿತು ಸದನದಲ್ಲಿ ಏನೇನು ನಡವಳಿಕೆಗಳು ನಡೆದಿವೆ, ಅದರ ಸಂಪೂರ್ಣ ಮಾಹಿತಿ ನನ್ನ ಹತ್ತಿರವಿದೆ. ಏನೂ ತೊಂದರೆ ಇಲ್ಲ. ತಾವು ಕೊಟ್ಟಿರುವ ಪೇಪರ್‌ಗಳು,

ಸ್ಕ್ರಿಪ್ಟ್‌ಗಳು ಎಲ್ಲವೂ absolutely they are in the safest custody of the K.P.S.C. ಒಂದೂ ಹೆಚ್ಚು -ಕಡಿಮೆಯಾಗಿಲ್ಲ. ಈಗ ಎಕ್ಸಾಮಿನರ್ ಬಗ್ಗೆ ಹೇಳುವುದಿದ್ದರೆ, ಅವರು ಏನು ಮಾಡಿದ್ದಾರೆಂದರೆ He was openly canvassing. ಎಲ್ಲಾ ಪತ್ರಿಕೆಗಳು ನನ್ನ ಹತ್ತಿರ ಬಂದಿದೆಯೆಂದು ಪ್ರಚಾರ ಮಾಡುತ್ತಿದ್ದರು. ಅವರು ಆ ರೀತಿ ಪ್ರಚಾರ ಮಾಡಿದ್ದರಿಂದ a written complaint was made to the Secretary K.P.S.C. based on this. ಏಕೆಂದರೆ, ಇವರೆಲ್ಲಾ ಪ್ರಚಾರ ಮಾಡುತ್ತಿದ್ದರು. He cannot be A good Examiner and therfore it was withdrawn.

ಶ್ರೀ ಬಿ. ಎಸ್. ಯಡಿಯೂರಪ್ಪ : ಆ ರೀತಿ ನಡೆಯುತ್ತಿತ್ತೆಂದು ಆಯಿತಲ್ಲಾ. ಉತ್ತರ ಪತ್ರಿಕೆಗಳನ್ನು ಎಕ್ಸಾಮಿನರ್‌ಗೆ ಕಳುಹಿಸಿಕೊಟ್ಟಿದ್ದು, ಆತ ನಂಬರ್ ತೆಗೆದುಕೊಳ್ಳಲು ಪ್ರಚಾರ ಮಾಡುತ್ತಿದ್ದ. ಇದೇ ಅವ್ಯವಹಾರಕ್ಕೆ ಮೂಲ. ನೀವು ಏನು ಒಪ್ಪಿಕೊಂಡಿದ್ದೀರಿ, ಅದೇ ಮೂಲ. ನೀವು ಹೇಳಿರುವುದೇ ಸಾಕ್ಷಿ.

Sri. M. Veerappa Moily : Since he was canvassing, we withdrew it. ಸ್ವಲ್ಪ ತಾಳ್ಮೆಯಿಂದಿದ್ದರೆ ಎಲ್ಲಾ ಸರಿಹೋಗುತ್ತದೆ. ನಿಮಗೆ ತಾಳ್ಮೆ ಇಲ್ಲ. ಇದರಿಂದ ನೀವೂ ಕೆಡುತ್ತೀರಿ. ನಿಮ್ಮ ಪಕ್ಷವನ್ನೂ ಕೆಡಿಸಿಕೊಳ್ಳುತ್ತೀರಿ, ಎಲ್ಲವನ್ನೂ ಕೆಡಿಸಿಕೊಳ್ಳುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮಿಂದ ನಮಗೆ ಬುದ್ಧಿವಾದ ಬೇಡ. ಇಲ್ಲಿ ಪಕ್ಷ ಕೆಡಿಸಿಕೊಳ್ಳುವುದು, ನಾವು ಕೆಡಿಸಿಕೊಳ್ಳುವುದು ಪ್ರಶ್ನೆಯಲ್ಲ. ನೀವು ಅಲ್ಲಿ ನಡೆದಿರುವ ಅವ್ಯವಹಾರವನ್ನೆಲ್ಲಾ ಮುಚ್ಚಿಹಾಕುವುದಕ್ಕೆ ಹೊರಟಿದ್ದೀರಿ. ಅವ್ಯವಹಾರಕ್ಕೆ ರಕ್ಷಣೆ ಕೊಡುವುದಕ್ಕೆ ಹೊರಟಿದ್ದೀರಿ. ಅದರ ಬಗ್ಗೆ ಹೇಳಿ.

ಶ್ರೀ ಕೆ. ಎಸ್. ಈಶ್ವರಪ್ಪ : ಮುಖ್ಯಮಂತ್ರಿಗಳಾಗಿ ನೀವು ಎಷ್ಟು ಉತ್ತರ ಕೊಡಬೇಕೋ ಅಷ್ಟು ಕೊಡಿ ಸಾಕು. ನಾನು ಭಾರತೀಯ ಜನತಾ ಪಕ್ಷದ ಅಧ್ಯಕ್ಷನಾಗಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಪಕ್ಷದ ಕಥೆ ನಿಮಗೆ ಬೇಕಾಗಿಲ್ಲ. ನಿಮ್ಮ ಪಕ್ಷದಲ್ಲೇ ಕತ್ತೆ ಸತ್ತು ಬಿದ್ದಿದೆ. ಮೊದಲು ಅದನ್ನು ನೋಡಿಕೊಳ್ಳಿ. ನಮ್ಮ ಪಕ್ಷದ ಬಗ್ಗೆ ಮಾತನಾಡಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಿಮ್ಮ ಪಕ್ಷದಲ್ಲಿ ಸತ್ತು ಬಿದ್ದಿರುವ ಕತ್ತೆಯನ್ನು ನಮ್ಮ ಕಡೆ ಎಸೆಯುವುದಕ್ಕೆ ಹೊರಟಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ : ಕರ್ನಾಟಕ ಲೋಕಸೇವಾ ಆಯೋಗದಲ್ಲಿ ನಡೆದಿರುವ ಅವ್ಯವಹಾರದ ವಿಷಯವನ್ನು ದಾಖಲೆ ಸಮೇತ ಕೊಟ್ಟಿದ್ದೇವೆ. ಆಗಿರುವ ಅನ್ಯಾಯ, ಅವ್ಯವಹಾರವನ್ನು ಯಾರ ಮುಂದಿಡಬೇಕೆಂಬುದನ್ನು ನೀವೇ ಹೇಳಿ.

Sri. M. Veerappa Moily : When I am on my legs ....

(Interruptions)

ಅಧ್ಯಕ್ಷರು : ಈಶ್ವರಪ್ಪನವರೇ, ತಾವು ಕುಳಿತುಕೊಳ್ಳಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ : ಅಧ್ಯಕ್ಷರೇ, ಈ ಸದನದಲ್ಲಿ ನ್ಯಾಯ ಸಿಗದಿದ್ದರೆ ಇನ್ನೆಲ್ಲಿ ನಾವು ಕೇಳಬೇಕು?

ಅಧ್ಯಕ್ಷರು : ಮುಖ್ಯಮಂತ್ರಿಗಳು ತಮ್ಮ ಹೇಳಿಕೆ ಕೊಟ್ಟ ನಂತರ ಏನಾದರೂ ಕೇಳುವುದಿದ್ದರೆ ಕೇಳಬೇಕು. ಅಲ್ಲಿಯವರೆಗೆ ತಾಳ್ಮೆಯಿಂದ ಅವರು ಹೇಳುವುದನ್ನು ಕೇಳಬೇಕು.

3.50 ಪಿ. ಎಂ.

ಅಧ್ಯಕ್ಷರು : ಈಗ ಅವರು ಹೇಳಿದರಲ್ಲಾ, ಅವರು ಸ್ಟೇಟ್‌ಮೆಂಟ್ ಕೊಟ್ಟ ನಂತರ, ತಮಗೆ ಏನಾದರೂ ಕೇಳುವುದು ಇದ್ದರೆ ಕೇಳಿ. ಅಲ್ಲಿಯವರೆಗೆ ತಾವು ತಾಳ್ಮೆಯಿಂದ ಕೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಅವರಿಗೆ ತಾಳ್ಮೆಯಿದ್ದಿದ್ದರೆ ಉತ್ತರ ಭಾರತದಲ್ಲಿ ರಾಜ್ಯ ಕಳೆದುಕೊಳ್ಳುತ್ತಿರಲಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಉತ್ತರ ಭಾರತದಲ್ಲಿ ಠೇವಣಿಯನ್ನು ಕಳೆದುಕೊಂಡಿದ್ದಾರೆ. ನಾವು ನಾಲ್ಕು ಜನರಿದ್ದೇ ನಿಮ್ಮಗೆ ಗಾಭರಿ ...

ಶ್ರೀ ಎಂ. ವೀರಪ್ಪ ಮೊಯಿಲಿ : ನಮಗೇನೂ ಕೊರತೆ ಇಲ್ಲ ಇಲ್ಲಿ. ನೀವು ತಾಳ್ಮೆ ಕೆಟ್ಟು ಇದ್ದ ಸೀಟುಗಳನ್ನು ಕಳೆದುಕೊಂಡಿದ್ದೀರಿ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಇವರು ವಿಷಯವನ್ನು ಬದಲಾಯಿಸುವುದು ಬೇಡ. ಮುಖ್ಯಮಂತ್ರಿಗಳಾಗಿ ಏನು ಉತ್ತರ ಕೊಡಬೇಕೋ ಅದನ್ನು ಕೊಡಿ, ರಾಜಕೀಯ ಮಾಡುವುದಕ್ಕೆ ಹೋಗಬೇಡಿ. ಅದಕ್ಕೆ ಬೇರೆ ಜಾಗವಿದೆ. ಅಲ್ಲಿಗೆ ಹೋಗೋಣ. ಉತ್ತರ ಕೊಡದಿದ್ದ ನೀವು ಪೂರ್ಣ ಡಿಪಾಸಿಟ್ ಕಳೆದುಕೊಂಡಿದ್ದೀರಿ. ನಾವು ಮೊದಲ ಸ್ಥಾನದಲ್ಲಿರುವಂತಹ ಪ್ರಯತ್ನದಲ್ಲಿ ಮತ್ತೆ ರಾಜಕೀಯ ಮಾಡುವುದಕ್ಕೆ ಶುರು ಮಾಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ದಯಮಾಡಿ ನನಗೆ ಅಪ್ಪಣೆ ಕೊಟ್ಟರೆ ನಾನುಕುಳಿತುಕೊಳ್ಳುತ್ತೇನೆ. ಅವರು ಮಾತನಾಡಲಿ. ಈಗ ಸಾಕಷ್ಟು ನಾನು ಹೇಳಿದ್ದೇನೆ. ಈಗಾಗಲೇ ಸಾಕಷ್ಟು ಅಲಿಗೇಷನ್‌ಗೆ ಆಧಾರವಿಲ್ಲ. ಆಧಾರ ಇಲ್ಲದೆ ಯಾವುದೋ ಉಹಾಪೋಹಗಳಿಂದ , ಉರ್ದು ಪತ್ರಿಕೆಯ ಮರು ಮಾಪನ ಮಾಡಲಿಲ್ಲ. That is with a communal tinge. Such allegation are made just because the secretary accidentallly happens to belong to a minority community....

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ರೀತಿ ಒಬ್ಬ ಮುಖ್ಯಮಂತ್ರಿಗಳಾಗಿ ಬೇಜವಾಬ್ದಾರಿಯಿಂದ ಹೇಳುವುದು ಏನು? ಇವತ್ತು ನಾನು ಸಕ್ರೆಟರಿ ಮುಸ್ಲಿಂ ಎಂದು ಪ್ರಸ್ತಾಪ ಮಾಡುತ್ತಿದ್ದೇನೆ. ಹಾಗಾದರೆ ಹಿಂದು ಮುಸ್ಲಿಂದ ಎಂದು ಹಿಸ್ಟರಿ ರಚಿಸುವುದಕ್ಕೆ ಹೊರಟಿದ್ದೀರೇನು? ನಾವು ನೀವು ಎಂದು ಭೇದ-ಭಾವ ಮಾಡುತ್ತಿಲ್ಲ. ನೀವು ಜಾತಿ ಹೆಸರನ್ನು ಹೇಳಿಕೊಂಡು ಏನೋ ಉದ್ಧಾರ ಮಾಡುತ್ತೇವೆಂದು ಹೇಳುವುದಕ್ಕೆ ಹೊರಟಿದ್ದೀರಿ. ನೀವು ಇದನ್ನು ನಡೆಸಬೇಡಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ: ಜಾತಿ ಹೆಸರಿನಲ್ಲಿ ಮಾತನಾಡುವ ಅಭ್ಯಾಸ ನಮಗೆ ಇಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಮುಸ್ಲಿಂ, ಕನ್ನಡಿಗರು ಯಾರು ತಪ್ಪು ಮಾಡಿದ್ದಾರೆ, ಅದರ ಬಗ್ಗೆ ವಿರೋಧವಿಲ್ಲವೆಂದು ಹೇಳಿ. ಇದೇ ನಿಮ್ಮ ಸೆಕ್ರೆಟರಿ 1 983ರಲ್ಲಿ ಅಸಿಸ್ಟೆಂಟ್ ಕಮಿಷನರ್ ಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಟ್ಯಾಂಪರ್ ಮಾಡಿ ಅವರು ಸಸ್ಪೆಂಡ್ ಆಗಿದ್ದರು.

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಮುಖ್ಯಮಂತ್ರಿಯವರಲ್ಲಿ ನನ್ನ ಒಂದು ವಿನಂತಿ ಏನೆಂದರೆ, ಆ ಕಡೆ ಈ ಕಡೆ ಹೋಗುವುದು ಬೇಡ, ನೇರವಾಗಿ ಉತ್ತರ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಿಮ್ಮ ನಾಲಿಗೆಯಲ್ಲಿ ಜಾತಿ ಹುಳು ಸೇರಿಕೊಂಡು ಬಿಟ್ಟಿದೆ. ಅದು ನಿಮ್ಮನ್ನು ತಿನ್ನುತ್ತಿದೆ. ನಿಮ್ಮ ನಾಲಿಗೆಯನ್ನು ಅದೇ ತಿನ್ನುತ್ತದೆ.

ಶ್ರೀ ಸಿ. ಭೈರೇಗೌಡ : ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ನೀವು ಆ ಕಡೆ ಹೋಗುವುದು ಬೇಡ, ನೇರವಾಗಿ ಉತ್ತರ ಕೊಡಿ.

ಶ್ರೀ ಎಂ. ವೀರಪ್ಪ ಮಾಯಿಲಿ : ಈಗ ಸಾಕಷ್ಟು ಅಪಾದನೆಗಳು ಬಂದಿವೆ. ನಾನು ಹೇಳುವುದು ಅಪಾದನೆಗಳು ಬಂದಿವೆ ಎಂದು. ಆಪಾದನೆಗಳು ಬರಲಿಲ್ಲವೇ? ಹಾಗಾದರೆ ಆಪಾದನೆಗಳು ಇಲ್ಲ ಎಂದು ಹೇಳಿ. ಆಗ ನಾನು ಕುಳಿತುಕೊಂಡು ಬಿಡುತ್ತೇನೆ. ಆಪಾದನೆ ವಿಚಾರ ಇವತ್ತು ಬಂದಿದೆ. ನಾನು ಹೇಳುವುದು ಅನೇಕ ಅಪಾದನೆಗಳನ್ನು ನಾವು ಕೂಡ ಗಮನಿಸಿದ್ದೇವೆ. ಅನೇಕ ಆಪಾದನೆಗಳಿಗೆ ಯಾವುದೇ ಆಧಾರ ಇಲ್ಲ, ಹುರುಳಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮಾಡಿದ್ದಾರೆ. ಮಾಲ್ ಪ್ರಾಕ್ಟೀಸಸ್ ಎಂದು ಹೇಳಿ ಬಂದಿದೆ, ಎಲಾಟ್‌ಕಿ ವ್ಯಾಲ್ಯೂಯೇಷನ್ ಎಂದು ಆಗಿದೆ, ನಾನ್ ವ್ಯಾಲ್ಯೂಯೇಷನ್ ಎಂದು ಬಂದಿದೆ. ಮತ್ತು 2 ಸಾವಿರ ಚಿಲ್ಲರೆ ಏನು ಸ್ಕ್ರಿಪ್ಟ್ ಇವೆ ಅವುಗಳಲ್ಲಿ ಏನಾಗಿದೆಯೆಂದರೆ ಅಡೀಷನಲ್ ಸೀಟ್‌ನಲ್ಲಿ ನಂಬರ್ ಹಾಕಿದ್ದಾರೆ. ಅಡಿಷನಲ್ ಶೀಟ್‌ನಲ್ಲಿ ನಂಬರ್ ಹಾಕಬಾರದಾಗಿತ್ತು.ಮತ್ತು certain percentage of marks ಮತ್ತು ಇದರ ಮೇಲೆ ಸಾಕಷ್ಟು ಗಂಭೀರವಾದಂತಹ ಅಪಾದನೆ ಮಾಡಿದ್ದಾರೆ. ಅದಕ್ಕಾಗಿ ಆಪಾದನೆಯನ್ನು ತಿಳಿದುಕೊಂಡೆ ಆ ಆಪಾದನೆಗಳಿಗೆ ಕೆಪಿಎಸ್‌ಸಿ ಸ್ಪಂದಿಸಿದೆ. ಸ್ಪಂದಿಸಲಿಲ್ಲವೆಂದು ಅಲ್ಲ. 19-994ಕ್ಕೆ 4 ಸದಸ್ಯರ ಒಂದು ಸಮಿತಿಯನ್ನು ಕೂಡ ಅವರು ಮಾಡಿದ್ದಾರೆ. ನಂತರ ಆಪಾದನೆ ಬಗ್ಗೆ ಕೂಲಂಕುಷವಾಗಿ ಕೆಪಿಎಸ್‌ಸಿಯವರು ನೋಡಿದ್ದಾರೆ. ನೋಡಲಿಲ್ಲ ಎಂದು ಅಲ್ಲ. ನಂತರ ನೋಡಿದ ಮೇಲೆ ಕೆಲವು ಕೇಂದ್ರಗಳಲ್ಲಿ ಏನು ಮಾಡಿದ್ದಾರೆಂದರೆ ಇನ್ವಿಜಿಲೇಟರುಗಳನ್ನಾಗಿ ಯಾರನ್ನೂ ನೇಮಕ ಮಾಡಿದ್ದಾರೆ, ಅವರು ಅಡಿಷನಲ್ ಶೀಟ್ ಮೇಲೆ ರಿಜಿಸ್ಟರ್ ನಂಬರ್ ಹಾಕಬೇಕು ಎಂದು ಹೇಳಿದ ಹಾಗೆ ಕೂಡ ಒಂದು ರೀತಿಯಲ್ಲಿ ಮಾತುಗಳು ಬಂದಿವೆ. ಈ ಬಗ್ಗೆ ಕೆಪಿಎಸಸಿಯ ಅಧ್ಯಕ್ಷರಾದಂತಹ ಸನ್ಮಾನ್ಯ ವೈ.ಕೆ. ಪುಟ್ಟಸ್ವಾಮಿಗೌಡರು ಇವತ್ತು ಒಂದು ನಮಗೆ ಪತ್ರ ಬರೆದಿದ್ದಾರೆ. ಎಲ್ಲಾ ಅಂಶಗಳನ್ನು ಒಳಗೊಂಡು, ಇದರ ಬಗ್ಗೆ ಆಪಾದನೆಗಳು ಮಾಡುತ್ತಿದ್ದಾರೆ. ಇದು ಒಂದು ರೀತಿ ಬೇರೆ ಬೇರೆ ದಿಕ್ಕಿನಲ್ಲಿ ಹೋಗುತ್ತದೆ. After all, as the Government believes in openness and tra<sparency, K.P.S.C., also believes in the philosophy of openness and transparency. ಇದರಲ್ಲಿ ಯಾರಾದರೂ ಜನ ಸಂಶಯದ ಕಾರ್ಮೋಡಗಳನ್ನು ಯಾವುದೇ ಶಕ್ತಿ ವ್ಯಕ್ತಿಗಳು ಅವರವರ ಪಟ್ಟಭದ್ರಾ ಹಿತಾಸಕ್ತಿಗೆ ಪೂರಕವಾಗಿ ಆ ಸಂಶಯದ ಕಾರ್ಮೋಡವನ್ನು ಹಬ್ಬಿಸಲಿಕ್ಕೆ ಪ್ರಯತ್ನ ಮಾಡುತ್ತಲೇ ಇರುತ್ತಾರೆ. ಆದರೆ ಇಂತಹ ಸಂಸ್ಥೆಗಳ ಮೇಲೆ ಇದು ಬರಬಾರದಾಗಿತ್ತು. ದುರಾದೃಷ್ಟಕರ, ಅದು ಆ ರೀತಿಯಾಗಿದೆ. ಆದರೆ ಈ ರೀತಿಯಾದಂತಹ ಒಂದು ಸಂಶಯದ ಕಾರ್ಮೋಡಗಳನ್ನು ಅನಾವಶ್ಯಕವಾಗಿ, ಪ್ರತ್ಯೇಕವಾಗಿ, ಅಪ್ರತ್ಯಕ್ಷವಾಗಿ, ಬೆಳೆಸಿ ಇಂತಹ ಒಂದು ಲೋಕಸೇವಾ ಆಯೋಗದ ಎಂಬ ಒಂದು ಪವಿತ್ರ ಸಂಸ್ಥೆಯ ಮೇಲೆ ಜನಗಳಿಗೆ ಅವಿಶ್ವಾಸ ಹುಟ್ಟುತಕ್ಕಂಥ ಅಥವಾ ಲೋಕಸೇವಾ ಆಯೋಗ ಕೆಲಸ ಮಾಡತಕ್ಕಂಥ ನ್ಯಾಯವಾದಂಥ ಕೆಲಸದಲ್ಲಿ ಸಂಶಯ ಹುಟ್ಟಿಸತಕ್ಕಂಥ ರೀತಿಯಲ್ಲಿ ಆ ಅಭಿಪ್ರಾಯ ಬರಬಾರದು ಎಂಬುದು ಇವರ ಪತ್ರದ ಸಾರಾಂಶ. ಆದುದರಿಂದ ಇದನ್ನೆಲ್ಲಾ ಆಲೋಚನೆ ಮಾಡಿ ಗಂಭೀರವಾಗಿ ಪರಿಶೋಧನೆ ಮಾಡಿ ಯವುದೇ ರೀತಿಯಾದ ಸಂಶಯ ಸಾರ್ವಜನಿಕರ ಮನಸ್ಸಿನಲ್ಲಿ ಯಾವುದೇ ಮಟ್ಟದಲ್ಲಿ ಉಂಟು ಮಾಡದ ರೀತಿಯಲ್ಲಿ .....

ಶ್ರೀ ವಾಟಾಳ್ ನಾಗರಾಜ್ : ಅವರು ತಮಗೆ ಏಕೆ ಪತ್ರ ಬರೆದರು ಎಂಬುದು ಗೊತ್ತಾಗಲಿಲ್ಲ. ಅವರು ತಮಗೆ ಪತ್ರ ಬರೆದ ಉದ್ದೇಶ.

ಶ್ರೀ ಎಂ. ವೀರಪ್ಪ ಮೊಯಿಲಿ : ಅವರು ನಮ್ಮ ಚೀಫ್ ಸೆಕ್ರೆಟರಿಗೆ ಬರೆದರು.

ಶ್ರೀ ವಾಟಾಳ್ ನಾಗರಾಜ್ : ಅವರು ಬರೆಯುವ ಹಾಗಿದ್ದರೆ ಅಧ್ಯಕ್ಷರಿಗೆ ಬರೆಯಬೇಕಾಗಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ : ಇಲ್ಲ ನಮ್ಮ ಸರ್ಕಾರಕ್ಕೆ ಬರೆಯಬಹುದು.

ಶ್ರೀ ವಾಟಾಳ್ ನಾಗರಾಜ್ : ಈ ಸಭೆಯಲ್ಲಿ ನಡೆದ ಚರ್ಚೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಚರ್ಚೆಯ ವಿಷಯವೇನೂ ಅಲ್ಲ. ಇದು ಒಟ್ಟು ಅಭಿಪ್ರಾಯ. ಅವರು ಒಟ್ಟು ನಿರ್ಣಯವನ್ನು ಇಂಟಿಮೇಟ್ ಮಾಡಿದ್ದಾರೆ. ಅವರ 2-9-94ರಂದು ಎಲ್ಲಾ ಸರ್ವ ಸದಸ್ಯರು ಸೇರಿ ಸರ್ವಾನುಮತದಿಂದ ಈ ನಿರ್ಣಯವನ್ನು ಮಾಡಿ ನಮ್ಮ ಚೀಫ್ ಸೆಕ್ರೆಟರಿಗೆ ತಿಳಿಸಿದ್ದಾರೆ. ಸರ್ಕಾರಕ್ಕೆ ತಿಳಿಸಬಹುದು. ಇದು ಸದನಕ್ಕೆ ತಿಳಿಸಬೇಕು ಎಂದು ಪ್ರಶ್ನೆ ಅಲ್ಲ. ಈ ಸದನದಲ್ಲಿ ಏನಾದರೂ ಕೆಪಿಎಸ್‌ಸಿ ವಿಚಾರ ಬಂದರೆ ಉತ್ತರ ಕೊಡಬೇಕಾದುದು I am the Portfolio Minister and I am entitled to give a reply. ಅವರಿಗೆ ನೇರವಾಗಿ ಬರೆಯಬೇಕಾದಂತಹ ಅಗತ್ಯ ಇಲ್ಲ. ಆದುದರಿಂದ ಸಾರ್ವಜನಿಕರ ಮನಸ್ಸಿನಲ್ಲಿ ಯಾವುದೇ ರೀತಿಯಾದಂತಹ ಗೊಂದಲ ಅಥವಾ ಶಂಕೆ ಬಾರದ ರೀತಿಯಲ್ಲಿ ಅದನ್ನೆಲ್ಲಾ ಚರ್ಚೆ ಮಾಡಿ ಇವತ್ತು 2-9-94ರಂದು ಅವರು ಸರ್ವಾನುಮತದಿಂದ ಏನು ಮಾಡಿದ್ದಾರೆಂದರೆ To cancel the results already announced and to take up re-valuation on of all answer scripts of al the candidates including those whose paper had not been valued for writing the Register numbers inside their answer scripts. ಈ ನಿರ್ಣಯ ಮಾಡಿದ್ದಾರೆ. ನಾಮ ಯಾವ ರೀತಿಯ ಹಸ್ತಕ್ಷೇಪವನ್ನೂ ಮಾಡಿಲ್ಲ, ಯಾವ ಪ್ರಭಾವವನ್ನೂ ಅವರ ಮೇಲೆ ಮಾಡಿಲ್ಲ. ಎಲ್ಲಾ ಆನ್ಸರ್ ಸ್ಕ್ರಿಪ್ಟ್, ಯಾರು ಅಡಿಷನಲ್ ಶೀಟ್ ಮೇಲೆ ನಂಬರ್ ಹಾಕಿದ್ದಾರೆ, ಎಲ್ಲಾ ಆನ್ಸರ್ ಶೀಟನ್ನು ಅವರು ರಿವ್ಯಾಲ್ಯೂಯೇಷನ್ ಮಾಡುವುದಕ್ಕೆ ಅವರು ನಿರ್ಣಯ ತೆಗೆದುಕೊಂಡಿದ್ದಾರೆ. ಆದ್ದರಿಂದ ಈ ನಿರ್ಣಯ ಬಂದಮೇಲೆ ಬಹುಶಃ ಮುಂದೆ ಚರ್ಚೆಗೆ ಅವಕಾಶ ಕೊಡದೆ ಇರುವುದು ಸೂಕ್ತ. ಇದು ಕೆಪಿಎಸ್‌ಸಿಯ ವಿಚಾರ, I think in future, let us try to avoid the debate on the working of hte KPSC and I must congratulate the KPSC for this kind of a great gesture made by them to demonstrate the openness and the transparency in their adminstration.

ಶ್ರೀ ಬಿ.ಎಸ್. ಯಡಿಯೂರಪ್ಪ : ಉತ್ತರಪತ್ರಿಕೆಗಳು ಖಾಲೀ ಇರುವಂಥದ್ದನ್ನು ರಿಜಿಸ್ಟರ್‌ನಂಬರ್ ಸಹಿತ ನಿಮಗೆ ಕಳುಹಿಸಿಕೊಡುತ್ತೇನೆ. ರಾಜ್ಯದ ಪರೀಕ್ಷೆಗಳಲ್ಲಿ ಯಾವುದು ಪೇಪರ್ ಕೊಟ್ಟಿದ್ದಾರೆ ಅದನ್ನು ನಿಮಗೆ ಕೊಡುತ್ತೇನೆ. ಖಾಲೀ ಪೇಪರ್‌ಗಳನ್ನು ಇವತ್ತು ಎಲ್ಲಾ ಕಡೆಯೂ ಹಂಚುತ್ತಿದ್ದಾರೆ ಅದಕ್ಕೆ ಇವತ್ತು ಹೊಸದಾಗಿ ಉತ್ತರಗಳನ್ನು ತುಂಬಿ ಕೊಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದನ್ನು ವಿಚಾರಣೆ ಮಾಡೋಣ. ಅದು fabricated, forged ಆಗಿದ್ದರೆ, you may enjoy the immunity ; but perhaps those people who are responsible, will have to be found out. We will request the KPSC for an enquiry.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಈ ಅವ್ಯವಹಾರವನ್ನು ಮುಚ್ಚಿ ಹಾಕುವುದರ ಜೊತೆಗೆ ಶಾಮೀಲಾಗಿ ಬೇಕುಬೇಕಾದವರಿಗೆ ಉದ್ಯೋಗವನ್ನು ಕೊಡಿಸುವುದಕ್ಕೋಸ್ಕರ ಕೋಟಿಗಟ್ಟಲೆ ಲೂಟಿ ಮಾಡಲಿಕೆ ಹೊರಟಿದ್ದಾರೆ. ಕೆ.ಪಿ.ಎಸ್‌ಸಿ ಕಾರ್ಯದರ್ಶಿ ಅಪರಾಧಿಗಳಲ್ಲಿ ಮೊದಲನೆ ಅಪರಾಧಿ. ಇದನ್ನು ಮುಚ್ಚಿಹಾಕುವುದಕ್ಕೆ ತಾವು ಪ್ರಯತ್ನ ಪಡುತ್ತಿದ್ದೀರಿ. ನೀವು ಅಧಿಕಾರದಲ್ಲಿ ಒಂದು ಕ್ಷಣ ಮುಂದುವರೆಯುವುಕ್ಕೆ ನಿಮಗೆ ನೈತಿಕ ಹಕ್ಕಿಲ್ಲ. ರಾಜೀನಾಮೆಯನ್ನು ಕೊಟ್ಟು ಮನೆಗೆ ಹೋಗಿ.

(ಹಂತದಲ್ಲಿ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಸಭಾತ್ಯಾಗ ಮಾಡಿದರು.)

ಶ್ರೀ ಎಂ. ವೀರಪ್ಪ ಮೊಯಿಲಿ : ಈಶ್ವರಪ್ಪನವರೇ, ನೀವು ಈ ಪೇಪರ್ ಮಾರಾಟ ಮಾಡುವುದಲ್ಲ, ಈ ರೀತಿಯಲ್ಲಿ ನೀವು ಜಾತಿಯ ವಾದವನ್ನು ಕೆಣಕಿ ದೇಶವನ್ನು ಮಾರಾಟ ಮಾಡುತ್ತೀರಿ, ದೇಶದ ಮಾನಮರ್ಯಾದೆಯನ್ನು ಮಾರಾಟ ಮಾಡುತ್ತಿದ್ದೀರಿ.

ಅಧ್ಯಕ್ಷರು : ಈಶ್ವರಪ್ಪನವೇರೇ, ಇಲ್ಲಿ ನಿಂತು ಮಾತನಾಡುವುದು ಉಚಿತವಲ್ಲ ತಾವು ತಮ್ಮ ಆಸನದ ಬಳಿ ಹೋಗಿ.

ಶ್ರೀ ಕೆ. ಎಸ್. ಈಶ್ವರಪ್ಪ : ಖಾಲೀ ಪತ್ರಿಕೆಯನ್ನು ಮಾರಾಟ ಮಾಡಿದ್ದಾರೆ. ಅದರಲ್ಲಿ ಬೇಕಾದನ್ನು ಬರೆಯಬಹದು, ಬೇಕಾದನ್ನು ತೂರಿಸಿಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್ : ಅದನ್ನು ಸಮಗ್ರ ತನಿಖೆ ಮಾಡಿ ಸ್ವಾಮಿ.

ಶ್ರೀ ಕೆ. ಎಸ್. ಈಶ್ವರಪ್ಪ : ಇದನ್ನು ಕೇವಲ ಮುಸಲ್ಮಾನರ ತೃಪ್ತಿಗೋಸ್ಕರ .....,

(ಮುಂದಲ)

ಅಧ್ಯಕ್ಷರು : ಈಶ್ವರಪ್ಪನವರೇ, ತಮಗೆ ನಾನು ಪದೇ ಪದೇ ಹೇಳುತ್ತಿದ್ದೇನೆ ತಾವು ಯಾವುದೋ ವಿಚಾರದಲ್ಲಿ ಹೋಗುವುದಲ್ಲ. It is not correct.

Sri. M. Veerappa Moily : No, No. He is a responsible person who is a Member of the House who has taken oath. The very fact that he is mentioning a particular community, that itself is in violation of the oath he has taken. It is for the people to judge him.

ಶ್ರೀ ವಾಟಾಳ್ ನಾಗರಾಜ್ : ನೋಡಿ ಸ್ವಾಮಿ ಇಲ್ಲಿ ಜಾತಿ ಪ್ರಶ್ನೆ ಅಲ್ಲ, ಅವರ್ಯಾರೋ ಮುಸ್ಲಿಂ ಅನ್ನುತ್ತಾರೆ, ಹಿಂದುಗಳೆನ್ನುತ್ತಾರೆ ಅದಕ್ಕೆ ನಾವ್ಯಾರೂ ತಯಾರಾಗಿಲ್ಲ, ನಾವು ತಯಾರಾಗಿರತಕ್ಕಂತದ್ದು ಅಲ್ಲಿ ನಡೆದಿರತಕ್ಕಂಥ ಕೆಲವಾರು ಅಕ್ರಮಗಳನ್ನು ಮುಖ್ಯಮಂತ್ರಿಗಳು ತನಿಖೆ ಮಾಡಿಸಬೇಕು ನೇರವಾಗಿ ಅಲ್ಲೆಲ್ಲಾ ಸರಿ ಇದೆ, ಅದು ಪರಮಪವಿತ್ರವಾದ ಸಂಸ್ಥೆ, ಯಾರೂ ಅದರ ಬಗ್ಗೆ ಗಮನಹರಿಸಬಾರದು ದೃಷ್ಟಿ ಇಡಬಾರದು, ಆ ಕಟ್ಟಡವನ್ನು ನೋಡಲೇಬಾರದು ಎನ್ನುವ ರೀತಿ ತಾವು ಮಾತನ್ನಾಡಿಬಿಟ್ಟರೆ ಪರಿಸ್ಥಿತಿ ಹೇಗೆ? ಅವರೂ ನಮ್ಮಂಥ ಮನುಷ್ಯರಲ್ಲವೇನು? ಅವರನ್ನು ನೇಮಕ ಮಾಡುವವರು ಯಾರು? ಆ ಸದಸ್ಯರನ್ನು ನಮ್ಮ ನಮ್ಮ ರಾಜಕಾರಣದ ಮೇಲೆ ನೇಮಕ ಆಗತಕ್ಕಂತದ್ದು, ಸದಸ್ಯರುಗಳಾಗಲೀ, ಅಧ್ಯಕ್ಷರುಗಳಾಗಲೀ, ತಮ್ಮಲ್ಲಿ ನಾನು ಬಹಳ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಇದರಲ್ಲಿ ನಾವು ಜಾತಿ ತರುತ್ತಿಲ್ಲ, ಅವರು ಯಾವ ಜಾತಿಯವರೇ ಆಗಿರಲಿ ಅದರ ಬಗ್ಗೆ ನನಗೆ ಬಹಳ ಗೌರವ ಇದೆ, ಜಾತಿ ಬಗ್ಗೆ ನಾನೆಂದೂ ಜೀವನದಲ್ಲಿ ಮಾಡಿಲ್ಲ ; ನನಗೂ ಇಂತಹ ಅನೇಕ ಪತ್ರಗಳು ಬಂದಿವೆ.....

. ಮಾನ್ಯ ಮುಖ್ಯ ಮಂತ್ರಿಗಳು ಕನಿಷ್ಟ ಪಕ್ಷ ಆ ಪರೀಕ್ಷೆಗಳನ್ನಾದರೂ ರದ್ದು ಮಾಡಿಸಿ ಎಂದರೆ ಅದನ್ನು ಮಾಡಿಸಲಿಲ್ಲ. ಹೋಗಲಿ ತನಿಖೆಯನ್ನಾದರೂ ಮಾಡಿಸುತ್ತೇನೆಂದು ನಾನು ಹೇಳುವುದಿಲ್ಲ ಎಂದರೆ ಹೇಗೆ? ವಿರೋಧಪಕ್ಷದಲ್ಲಿ ಕುಳಿತ ನಾನು ನಾಲ್ಕು ಮಾತನ್ನು ಹೇಳಿದರೆ ತಮಗೆ ಸಿಟ್ಟು ಬರುತ್ತದೆ. ಅದು ಬರಬಾರದು. ನಾವು ಹೇಳಿದರೆ ನೀವು ಏತಕ್ಕೆ ಸಿಟ್ಟುಮಾಡಿಕೊಳ್ಳುತ್ತೀರಿ? ಅವರು ಹೇಳುವುದೂ ಕೂಡ ಸರಿಯಿಲ್ಲ. ನಿಮ್ಮಿಬ್ಬರ ಸಿಟ್ಟಿನ ಮಧ್ಯೆ ನಮ್ಮ ಪರಿಸ್ಥಿತಿ ಏನು?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗಾಗಲೇ ಸುಪ್ರೀಂ ಕೋರ್ಟ್‌ನವರು ತೀರ್ಪು ಕೊಟ್ಟು ನಿಮ್ಮ ಜಾತೀಯ ವಾದವನ್ನು, ಪಕ್ಷ, ಸರ್ಕಾರವನ್ನು ನೀವು ಈ ದೇಶದಲ್ಲಿ ನಡೆಸುವದಕ್ಕಾಗುವುದಿಲ್ಲ ಎಂದು ಹೇಳಿದ ಮೇಲೂ ಕೂಡ ಮತ್ತೆ ನಾವು ಅದನ್ನೇ ನಡೆಸುತ್ತೇವೆಂದರೆ ಹೇಗೆ? ಪ್ರಜಾಪಭುತ್ವದ ಚೌಕಟ್ಟಿನಲ್ಲಿ ಇವತ್ತು ಅವರು ಕೆಲಸ ಮಾಡುವುದಕ್ಕೆ ಅವರಿಗೆ ಅರ್ಹತೆ ಇದೆಯೇ? ಅವರಿಗೆ ಯೋಗ್ಯತೆ ಇದೆಯೇ ಎಂಬುದನ್ನು ಯೋಚನೆ ಮಾಡೋಣ. ತಾವು ಈಗ ಹೇಳಿದ್ದುದು ಸರಿಯಾದ ಮಾತು. ತಾವು ನ್ಯಾಯವಾದ ಮಾತನ್ನು ಹೇಳಿದಿರಿ. ಎಲ್ಲಾ ಪೇಪರ್‌ಗಳನ್ನೂ ಇವ್ಯಾಲ್ಯೂಯೇಷನ್ ಮಾಡುತ್ತಾರೆಂದರೆ ಏನು ಅರ್ಥ? ರಿವ್ಯಾಲ್ಯುಯೇಷನ್ ಮಾಡಿದಾಗ, ಒಂದು ವೇಳೆ ಅಲ್ಲಿ ಇರೆಗ್ಯುಲಾರಿಟಿ ಮಾಡಿದಾಗ ಅದು ಬಯಲಿಗೆ ಬಂದೇ

ಬರುತ್ತದೆ. ತಮ್ಮ ಭಾವನೆಯ ಪ್ರಕಾರ ತನಿಖೆಗೆ ಆರ್ಡರ್ ಮಾಡುವುದಕ್ಕೆ ನಮಗೆ ಅಧಿಕಾರವಿಲ್ಲ. ತಮ್ಮ ಭಾವನೆಗಳನ್ನು ನಾವು ಕರ್ನಾಟಕ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ತಿಳಿಸುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯ ಮೊದಲು ಸರಿಯಾಗಿ ಇರಲಿಲ್ಲ. ನಾವು ತನಿಖೆಯನ್ನು ಮಾಡಿಸುತ್ತೇವೆಂದು ಹೇಳಿದ್ದರು. ಆದರೆ ಈಗ ಅದನ್ನು ತಿದ್ದಿಕೊಂಡಿದ್ದಾರೆ. ಬಹಳ ಸಂತೋಷ. ಏಕೆಂದರೆ ಕೆ.ಪಿ.ಎಸ್.ಸಿ.ಗೆ ರಾಜ್ಯಾಂಗದತ್ತವಾದ ಕೆಲವು ಸ್ಥಾನಮಾನಗಳಿವೆ .....

ಅಧ್ಯಕ್ಷರು : ನೀವು ಪುನಃ ಪುನಃ ಹೀಗೆ ಎದ್ದುನಿಂತರೆ ನಾನು ಏನು ಹೇಳಲಿ.

ಶ್ರೀ ಸಿ. ಭೈರೇಗೌಡ : ನಾವು ತನಿಖೆ ಮಾಡಿಸುತ್ತೇವೆಂದು ಅವರು ಮೊದಲು ಹೇಳಿದ್ದುದು ಸರಿ ಇರಲಿಲ್ಲ. ಈಗ ಅದನ್ನು ಅವರು ಸರಿಪಡಿಸಿಕೊಂಡಿದ್ದಾರೆ. ಅದಕ್ಕೆ ಸಂತೋಷ.

ವಿತ್ತೀಯ ಕಾರ್ಯಕಲಾಪಗಳು

1994-95ನೇ ಬೇಡಿಕೆಗಳ ಮೇಲಿನ ಮಂಡನೆ. ಚರ್ಚೆ ಮತ್ತು ಮತಕ್ಕೆ ಹಾಕುವುದು.

ಅಭಿಯಾಚನೆ ಕರ್ಮಾಂಕ : 56 - ಕ್ರಮಪಡಿಸಿದ ಮಾರುಕಟ್ಟೆಗಳು

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಖಾತೆ ಸಚಿವರು) ಕ್ರಮಪಡಿಸಿದ ಮಾರುಕಟ್ಟೆಗಳ ಮಂತ್ರಿಗಳ ಪರವಾಗಿ : ಮಾನ್ಯ ಅಧ್ಯಕ್ಷರೇ,

ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗಾಗಿ - ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕ ರಾಜಸ್ವ ಖಾತೆಯಲ್ಲಿ 16,43,70,000 ರೂ. ಗಳಿಗಿಂತ ಮಿಗಾದ ಮೊತ್ತವನ್ನು (ಲೇಖಾನುಗಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 35 : ಸಣ್ಣ ನೀರಾವರಿ :

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸಮಾಜ ''ಕಲ್ಯಾಣ ಖಾತೆ'' ಮಂತ್ರಿಗಳು (ಸಣ್ಣ ನೀರಾವರಿ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ,

''ರಾಜ್ಯಪಾಲರ ಶಿಪಾರಸ್ಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 56, 29,50,000 ರೂ.ಗಳಿಗಂತ ಮಿಗಾದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 57,31,39,000 ರೂ.ಗಳಿಗಿಂತ ಮಿಗಾದ ಮೊತ್ತವನ್ನು (ಲೇಖಾನುಗಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.''